Email: ksoulwc@gmail.com
Phone: 86905 44544

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–570006

## ಕಲಿಕಾರ್ಥಿಗಳ ಕಲ್ಯಾಣ ಕೇಂದ್ರ

---

## "ಮಾರ್ಗದರ್ಶಿ"

### ವಿದ್ಯಾರ್ಥಿ– ಅಧಿಕಾರಿ ಸಂವಾದ ಕಾರ್ಯಕ್ರಮ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ರಾಜ್ಯದ ದೂರ ಶಿಕ್ಷಣ ಮಾದರಿಯಲ್ಲಿ ಏಕೈಕ ವಿಶ್ವವಿದ್ಯಾನಿಲಯವಾಗಿ ಶಾಸನಾತ್ಮಕ ಮಾನ್ಯತೆ ಪಡೆದಿದೆ. ರಾಜ್ಯದ ಮೂಲೆ ಮೂಲೆಗೂ ಶಿಕ್ಷಣ ಪ್ರಸರಿಸುವ ಮುಖಾಂತರ Gross Enrollment Ratio ನ ಹೆಚ್ಚಳಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಾ ಬಂದಿದೆ. ಜಾಗತಿಕ ಶೈಕ್ಷಣಿಕ ಸ್ಪರ್ಧೆಗೆ ಅನುಗುಣವಾಗಿ ತಾಂತ್ರಿಕ ಬದಲಾವಣೆಯೊಂದಿಗೆ ಅತ್ಯಂತ ಕಡಿಮೆ ದರದಲ್ಲಿ ನಾಡಿನ ಜನತೆಗೆ ಉನ್ನತ ಶಿಕ್ಷಣ ನೀಡುತ್ತಾ ಸಾಗುತ್ತಿದೆ. ಕೇವಲ ಪದವಿ ಪ್ರಮಾಣ ಪತ್ರಗಳಲ್ಲದೇ, ಉದ್ಯೋಗ ಮೇಳಗಳನ್ನು ಆಯೋಜನೆ ಮಾಡಿ ಶಿಕ್ಷಣ ಬದುಕಿಗೆ ಹಾದಿ ತೋರುವಂತೆ ಕ್ರಮ ವಹಿಸುತ್ತಿರುವುದು ಮುಕ್ತ ವಿಶ್ವವಿದ್ಯಾನಿಲಯದ ಹೆಗ್ಗಳಿಕೆ. ಮುಂದುವರೆದು, ಹಲವು ಕಾರಣಗಳಿಂದ ಶಿಕ್ಷಣ ವಂಚಿತರಾದವರಿಗೆ ಮನೆ ಬಾಗಿಲಿಗೆ ಪ್ರಾದೇಶಿಕ ಕೇಂದ್ರಗಳು ಸೇರಿದಂತೆ ಶಿಕ್ಷಣವನ್ನು ಕೊಂಡೊಯ್ಯುತ್ತಿದೆ. ಇದೇ ನಿಟ್ಟಿನಲ್ಲಿ ನಮ್ಮ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳು ಶೈಕ್ಷಣಿಕ ವ್ಯವಸ್ಥೆಯ ಯಾವುದೇ ಸಮಸ್ಯೆಗಳನ್ನು ಎದುರಿಸದಂತೆ ತಡೆಗಟ್ಟಲು ಹಾಗೂ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಮತ್ತು ಮಾರ್ಗದರ್ಶನ ಪಡೆಯಲು ಸಹಕಾರಿಯಾಗುವಂತೆ ಮಾನ್ಯ ಕುಲಪತಿಗಳ ನಿರ್ದೇಶನದಡಿಯಲ್ಲಿ ಕಲಿಕಾರ್ಥಿ ಕಲ್ಯಾಣ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಕೇಂದ್ರವು ಕಾಲಕಾಲಕ್ಕೆ Call Centre ಮುಖಾಂತರ ವಿದ್ಯಾರ್ಥಿಗಳ ಜೊತೆ ಸಂಪರ್ಕ, ಸಂವಹನವನ್ನು ಇಟ್ಟು ಕೊಂಡಿದ್ದು, ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಿದೆ.

ಪ್ರಸ್ತುತ ಮಾನ್ಯ ಕುಲಪತಿಗಳು ಹಾಗೂ ಮಾನ್ಯ ಕುಲಸಚಿವರ ನಿರ್ದೇಶನದಂತೆ ಈ ಕೇಂದ್ರದ ಚಟುವಟಿಕೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಲು ನೂತನವಾಗಿ "ಮಾರ್ಗದರ್ಶಿ" ಎಂಬ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯಲ್ಲಿ ವಿದ್ಯಾರ್ಥಿಗಳು ಮತ್ತು ಅಧಿಕಾರಿಗಳ ಜೊತೆಯಲ್ಲಿ ನೇರ ಸಂಪರ್ಕವನ್ನು ಏರ್ಪಡಿಸಲಾಗುತ್ತದೆ. ಪ್ರತಿ ಸೋಮವಾರ ಕೇಂದ್ರದ ಸಂಯೋಜನಾಧಿಕಾರಿಗಳು ಮತ್ತು ಸಹಾಯಕ ಕುಲಸಚಿವರು, ವಿದ್ಯಾರ್ಥಿಗಳ ಜೊತೆಯಲ್ಲಿ 2 ಗಂಟೆಗಳ ಕಾಲ ನೇರ ಸಂವಾದ ಕೈಗೊಳ್ಳಲಿದ್ದಾರೆ. **ದಿನಾಂಕ: 28.07.2023 ರಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಪ್ರಥಮ ಸಂವಾದದಲ್ಲಿ ಮಾನ್ಯಕುಲಪತಿಗಳು, ಮಾನ್ಯ ಕುಲಸಚಿವರು, ಕುಲಸಚಿವರು ಪರೀಕ್ಷಾಂಗ ಭಾಗವಹಿಸಲಿದ್ದು,** ವಿದ್ಯಾರ್ಥಿಗಳು ಈ ಕೆಳಕಂಡ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

1. 9141181237
2. 9141181238
3. 9141181242
4. 9141181245